ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ತುಂಗಾ ಮೇಲ್ದಂಡೆ ಯೋಜನೆಯಡಿ ಯೋಜಿಸಿರುವ ಹೊಸ ಅಣೆಕಟ್ಟು ನಿರ್ಮಾಣ ಪ್ರಾರಂಭಿಸಿದ ಅಗೆತದ ಹಂತದಲ್ಲಿದೆ. ಹೊಸ ಅಣೆಕಟ್ಟೆಯ ಅಂದಾಜು ಮೊತ್ತ ರೂ. 9200 ಲಕ್ಷಗಳು. ಹೊಸ ಅಣೆಕಟ್ಟೆಯ ಕೆಲಸವನ್ನು ಫೆಬ್ರವರಿ-2002ರಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಆ) ಹಾವೇರಿ ಜಿಲ್ಲೆಯಲ್ಲಿನ ತುಂಗಾ ಮೇಲ್ದಂಡೆ ಯೋಜನೆಯ ಮುಖ್ಯ ಕಾಲುವೆಯ ಉದ್ದ 249.50 ಕಿ.ಮೀ.

ಇ) ಹಾವೇರಿ ಜಿಲ್ಲೆಯಲ್ಲಿನ ಸುರಂಗದ ಮಾರ್ಗದ ಉದ್ದ 3.90 ಕಿ.ಮೀ.

ಈ) ಈ ಯೋಜನೆಯನ್ನು 2002ರಲ್ಲಿ ಪೂರ್ಣಗೊಳಿಸಲು ಯೋಜಿಸಿದೆ.

ಬೈಲಹೊಂಗಲ ನಗರದಲ್ಲಿ ಉಪವಿಭಾಗಾಧಿಕಾರಿಗಳ ವಸತಿ ಗೃಹಕ್ಕೆ ಆಯವ್ಯಯದಲ್ಲಿ ಒದಗಿಸುವ ಮೊತ್ತ

807 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಉಪ ವಿಭಾಗಾಧಿಕಾರಿಗಳ ವಸತಿ ಗೃಹವನ್ನು ಕಟ್ಟುವ ಕೆಲಸವು ಈ ವರ್ಷದ ಆಯವ್ಯಯದಲ್ಲಿ ಸೇರಿದ ಸಂಗತಿ ನಿಜವೇ? ಹಾಗಿದ್ದಲ್ಲಿ ಈ ಕೆಲಸಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು?

ಆ) ಲೋಕೋಪಯೋಗಿ ಇಲಾಖೆಯವರು ಈ ಮೊತ್ತಕ್ಕೆ ಅಂದಾಜು ವೆಚ್ಚ ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗಾಗಿ ಕಂದಾಯ ಇಲಾಖೆಗೆ ಕಳುಹಿಸಿರುವುದು ನಿಜವೆ?

ಇ) ಲೋಕೋಪಯೋಗಿ ಇಲಾಖೆಯವರು ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವಲ್ಲಿ ವಿಳಂಬ ಮಾಡಿದ್ದರಿಂದ ಮಂಜೂರಾದ ಹಣ ಲ್ಯಾಪ್ಸ್ ಆಗುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಕಂದಾಯ ಇಲಾಖೆಯ ಅಧಿಕಾರಿಗಳು ಆಯವ್ಯಯದಲ್ಲಿ ತೋರಿಸಿದ ಪ್ರಕಾರ ಈ ಕೆಲಸಕ್ಕೆ ಕೂಡಲೇ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗುವುದೇ?

ಉ) ಇದಕ್ಕೆ ತಾಂತ್ರಿಕ ಮಂಜೂರಾತಿಯನ್ನು ಸಹ ಪಡೆಯಲಾಗುವುದೆ?

ಶ್ರೀ ಧರಮ್‌ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು. ಈ ಕೆಲಸಕ್ಕೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ. 5.00 ಲಕ್ಷಗಳ ಅನುದಾನ ಒದಗಿಸಲಾಗಿದೆ.

ಆ) ಹೌದು.

ಇ) ಕಂದಾಯ ಇಲಾಖೆಯಿಂದ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಅನುದಾನ ಲ್ಯಾಪ್ಸ್ ಆಗುವ ಸಂಭವವಿಲ್ಲ.

ಈ) ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಉ) ತಾಂತ್ರಿಕ ಮಂಜೂರಾತಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ಸವದತ್ತಿ ತಾಲ್ಲೂಕಿನ ಮಾಟೋಹಳ್ಳಿಗೆ ಹೊಸ ಏತ ನೀರಾವರಿ ಮೂಲಕ ನೀರು

808 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಾಟೋಳ್ಳಿ ಗ್ರಾಮದ ಜಮೀನುಗಳಿಗೆ ಮಲಪ್ರಭಾ ನದಿಯಿಂದ ಹೊಸ ಏತ ನೀರಾವರಿ ಮುಖಾಂತರ ನೀರು ಒದಗಿಸಲು ಸರ್ಕಾರ ಆಡಳಿತಾತ್ಮಕ ಮಂಜೂರಾತಿಯನ್ನು ಎಂದು ನೀಡಲಾಯಿತು? ಹಾಗೂ ಎಷ್ಟು ಮೊತ್ತಕ್ಕೆ ನೀಡಲಾಯಿತು?

ಆ) ಮುಖ್ಯ ಇಂಜಿನಿಯರ್, ನೀರಾವರಿ (ಉತ್ತರ), ಬೆಳಗಾವಿ ಇವರು ಎಷ್ಟು ಮೊತ್ತಕ್ಕೆ ತಾಂತ್ರಿಕ ಮಂಜೂರಾತಿಯನ್ನು ನೀಡಿದರು ಹಾಗೂ ಎಂದು ನೀಡಿದರು?

ಇ) ಈ ಕಾಮಗಾರಿಗಾಗಿ ಟೆಂಡರ್ ಕರೆಯಲಾಗಿದೆಯೆ ಹಾಗಿದ್ದಲ್ಲಿ ಎಷ್ಟು ಮೊತ್ತಕ್ಕೆ ಟೆಂಡರ್ ಕರೆಯಲಾಗಿದೆ?

ಈ) ಈ ಕೆಲಸ ಇನ್ನುವರೆಗೂ ಪ್ರಾರಂಭವಾಗದೇ ಇರುವ ಸಂಗತಿ ನಿಜವೇ? ಇನ್ನೂ ಎಷ್ಟು ದಿನಗಳಲ್ಲಿ ಈ ಕೆಲಸ ಪ್ರಾರಂಭವಾಗುವುದು?

ಶ್ರೀ ಹೆಚ್. ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಮಲ್ಲೂರು-ಮಾಟೋಹಳ್ಳಿ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿ ಕೊಳ್ಳಲು ಸರ್ಕಾರದ ಪತ್ರ ಸಂಖ್ಯೆ:ಐಡಿ 143 ಎಂಪಿಎಸ್ 92, ದಿನಾಂಕ: 18-11-98ರಲ್ಲಿ ರೂ. 91.76 ಲಕ್ಷ ಮೊತ್ತಕ್ಕೆ ಮಂಜೂರಾತಿ ನೀಡಲಾಗಿದೆ.

ಆ) ಮುಖ್ಯ ಇಂಜಿನಿಯರ್, ನೀರಾವರಿ (ಉತ್ತರ), ಬೆಳಗಾವಿ ಇವರು ನೋಂದಣಿ ಸಂಖ್ಯೆ:ಸಿಇಎನ್ 19 ಮೇ 1999ರಲ್ಲಿ ರೂ. 91.76 ಲಕ್ಷ ಮೊತ್ತಕ್ಕೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಇ) ಸದರಿ ಏತ ನೀರಾವರಿ ಯೋಜನೆಯ ಅಪ್ರೋಚ್ ಕಾಲುವೆ, ಜ್ಯಾಕ್‌ವೆಲ್, ರೈಜಿಂಗ್ ಮೇನ್ ಮತ್ತು ಡೆಲಿವರಿ ಛೇಂಬರ್‌ಗಳ ಕಾಮಗಾರಿಗಳಿಗಾಗಿ ಗುತ್ತಿಗೆಯನ್ನು ಕರೆಯಲಾಗಿದೆ. ಇವುಗಳ ಒಟ್ಟು ಮೊತ್ತ ರೂ. 45.17 ಲಕ್ಷ.